ರಾಜ್ಯ ಹೆದ್ದಾರಿ ಉದ್ದ - 11395 ಕಿ.ಮೀ. ಸಂಖ್ಯೆ 79

ಜಿಲ್ಲಾ ಮುಖ್ಯ ರಸ್ತೆ 28284 ಕಿ.ಮೀ. ಉದ್ದ

2) 7 ರಾಷ್ಟ್ರೀಯ ಹೆದ್ದಾರಿಗಳು.

3) ಕೇಂದ್ರವು 1972ರ ನಂತರ ರಾಜ್ಯದಲ್ಲಿ ಯಾವುದೇ ಹೊಸ ರಾಷ್ಟ್ರೀಯ ಹೆದ್ದಾರಿಯನ್ನು ಘೋಷಿಸಿರುವುದಿಲ್ಲ. ರಾಷ್ಟ್ರೀಯ ಹೆದ್ದಾರಿಗಳ ದುರಸ್ತಿಗೆ 1996-97ನೇ ಸಾಲಿನಲ್ಲಿ 1939.30 ಲಕ್ಷ ರೂ. ಅನುದಾನ ನಿಗದಿಪಡಿಸಿದೆ.

4) ಹೌದು.

5) ರಾಷ್ಟ್ರೀಯ ಹೆದ್ದಾರಿಯು ಸೇರಿದಂತೆ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆಗಳು ಪ್ರತಿ 100 ಚ.ಕಿ.ಮೀ. 21.73 ಕಿ.ಮೀ. ಉದ್ದವಿದೆ.

6) ರಾಷ್ಟ್ರೀಯ ಹೆದ್ದಾರಿಯು ಸೇರಿದಂತೆ ರಾಜ್ಯದಲ್ಲಿ ಒಟ್ಟು 397 ದೊಡ್ಡ ಸೇತುವೆಗಳು ಹಾಗೂ 64,700 ಸಣ್ಣ ಸೇತುವೆಗಳಿರುತ್ತವೆ.

7) ರಸ್ತೆಗಳ ದುರಸ್ತಿಯನ್ನು ಲಭ್ಯವಿರುವ ಅನುದಾನದಲ್ಲಿ ಕೈಗೊಳ್ಳಲಾಗುತ್ತಿದೆ.

ವಿಷಯ:- ರಾಷ್ಟ್ರೀಯ ಕ್ರೀಡಾ ಕೂಟ ಕುರಿತು.

173(373)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಎ) ರಾಷ್ಟ್ರೀಯ ಕ್ರೀಡಾಕೂಟ ಯಾವಾಗ ನಡೆಯುತ್ತದೆ;

ಬಿ) ಈ ಬಗ್ಗೆ ಸಿದ್ಧತೆಗಳು ಏನೇನು ನಡೆದಿದೆ; (ವಿವರ ನೀಡುವುದು);

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):-

ಎ) ರಾಷ್ಟ್ರೀಯ ಕ್ರೀಡಾಕೂಟವು 1997ರ ಮೇ 18 ರಿಂದ 29ರ ವರೆಗೆ ನಡೆಯುತ್ತದೆ.

ಬಿ) ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವ ಸಲುವಾಗಿ ಈ ಕೆಳಕಾಣಿಸಿದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಶ್ರೀ ಕಂಠೀರವ ಕ್ರೀಡಾಂಗಣದ ಆಧುನೀಕರಣ.
2. ಶ್ರೀ ಕಂಠೀರವ ಕ್ರೀಡಾಂಗಣದ ಆವರಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ.
3. ಹಾಕಿ ಕ್ರೀಡಾಂಗಣ ನಿರ್ಮಾಣ.
4. ಕಾಲ್ಚೆಂಡು ಕ್ರೀಡಾಂಗಣದ ಅಭಿವೃದ್ಧಿ.

5. ಹೊಂಬೇಗೌಡ ನಗರ ಮತ್ತು ವಿದ್ಯಾಪೀಠ ವೃತ್ತಗಳಲ್ಲಿನ ಮಹಾನಗರ ಪಾಲಿಕೆ ಆಟದ ಬಯಲುಗಳ ಅಭಿವೃದ್ಧಿ.

6. ಸುಲೇಮಾನ್ ಪೋಲೀಸ್ ಮೈದಾನದ ಅಭಿವೃದ್ಧಿ.

7. ಗುರುನಾನಕ ಭವನದ ಅಭಿವೃದ್ಧಿ.

8. ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದ ಅಭಿವೃದ್ಧಿ.

9. ಮೈಸೂರು ಸಾಹುಕಾರ್ ಚನ್ನಯ್ಯ ಕುಸ್ತಿ ಅಖಾಡಾ ಅಭಿವೃದ್ಧಿ.

10. ಮೈಸೂರು ಒಳಾಂಗಣ ಕ್ರೀಡಾಂಗಣ ನಿರ್ಮಾಣ.

ಈ ಎಲ್ಲಾ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ದಿನಾಂಕ 31-3-1997ರ ಹೊತ್ತಿಗೆ ಪೂರ್ಣಗೊಳ್ಳಲಿವೆ.

ಬೆಂಗಳೂರಿನಲ್ಲಿ ಕೋರಮಂಗಲ ಮತ್ತು ಮೈಸೂರಿನಲ್ಲಿ ಹೂಟಗಹಳ್ಳಿ ಬಳಿ ಇರುವ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವಸತಿ ಗೃಹಗಳಲ್ಲಿ ಕ್ರೀಡಾಪಟುಗಳಿಗೆ ವಸತಿ ಸೌಕರ್ಯವನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಷ್ಟ್ರೀಯ ಕ್ರೀಡೆಗಳಿಗಾಗಿ ಪೂರ್ವಸಿದ್ಧತೆಗಳನ್ನು ಮಾಡಲು ಕೆಳಕಾಣಿಸಿದ ಸಮಿತಿ ಮತ್ತು ಉಪ ಸಮಿತಿಗಳನ್ನು ರಚಿಸಲಾಗಿದೆ.

1. ತಾಂತ್ರಿಕ ಸಮಿತಿ (ಜಿ.ಟಿ.ಸಿ.ಸಿ.)
2. ಭೋಜನ ಉಪ ಸಮಿತಿ.
3. ವಸತಿ ಉಪ ಸಮಿತಿ.
4. ಸಾರಿಗೆ ಉಪ ಸಮಿತಿ.
5. ಸ್ವಾಗತ ಉಪ ಸಮಿತಿ.
6. ಪ್ರಚಾರ ಉಪ ಸಮಿತಿ.
7. ಸಾಂಸ್ಕೃತಿಕ ಮತ್ತು ಸಮಾರಂಭಗಳ ಉಪ ಸಮಿತಿ.

ಈ ಎಲ್ಲಾ ಉಪ ಸಮಿತಿಗಳು ಸಭೆ ಸೇರಿ, ದತ್ತವಾದ ಎಲ್ಲಾ ಸಿದ್ಧತೆ ಕ್ರಮಗಳನ್ನು ಕೈಗೊಳ್ಳುತ್ತಿದೆ.

ವಿಷಯ:- ಕಾರ್ಮಿಕರ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಹಾಗೂ ಸಿಬ್ಬಂದಿ ಕುರಿತು.

174(382)

ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು):- ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-